# ಶ್ರೀ ದೇವೀ ಮಹಾತ್ಮೆ ಮತ್ತು ಭಕ್ತಿ ಪರಂಪರೆ

**ಶ್ರೀದೇವಿ[1] & ಧನಂಜಯ ಕುಂಬ್ಳೆ[2]**

[1]ಸಂಶೋಧನಾ ವಿದ್ಯಾರ್ಥಿನಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಸಹಾಯಕ ಪ್ರಾಧ್ಯಾಪಕರು, ಎಸ್. ವಿ. ಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**Received: 12-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284021**

**ABSTRACT:**

ನಮ್ಮ ಸಂಸ್ಕೃತಿಯಲ್ಲಿ ಹಲವು ರೂಪಗಳೊಂದಿಗೆ, ಹಲವು ಮಾರ್ಪಾಡುಗಳೊಂದಿಗೆ ಭಕ್ತಿ ಪರಂಪರೆಯು ನಾಡಿನಾದ್ಯಂತ ಹಬ್ಬಿಕೊಂಡು ಬಂದಿದೆ. ಸಾಹಿತ್ಯಕವಾಗಿಯೂ, ಸಾಂಸ್ಕೃತಿಕವಾಗಿಯೂ ಭಕ್ತಿ ಪರಂಪರೆಯು ಹಲವು ಆಯಾಮಗಳಲ್ಲಿ ಬಹುಮುಖ್ಯ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಇದರಿಂದಾಗಿ ಜನಸಾಮಾನ್ಯರಲ್ಲಿರುವ ಭಕ್ತಿಯ ಭಾವ ಹಲವಾರು ವಿಧಾನಗಳ ಮೂಲಕ ಪ್ರಕಟಗೊಳ್ಳುತ್ತದೆ. ದೇವರನ್ನು ಪ್ರೀತಿಯಿಂದ, ಶ್ರದ್ಧಾ-ಭಕ್ತಿಯಿಂದ, ಆತ ನಮ್ಮವನೇ ಎಂಬ ಸಲಿಗೆಯಿಂದ, ಸಮರ್ಪಣಾ ಭಾವದಿಂದ ಹಲವರು ಹಲವು ರೀತಿಯಲ್ಲಿ ಒಲಿಸಿಕೊಳ್ಳುವ, ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನ ಭಕ್ತಿ ಪರಂಪರೆಯ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ಹೇಳುತ್ತದೆ. ದೇವರ ಅನುಗ್ರಹಕ್ಕಾಗಿ ಜನರು ಇಂತಹ ವಿವಿಧ ಭಕ್ತಿ ಮಾರ್ಗದ ಮೂಲಕ ಪ್ರಯತ್ನಿಸುವುದೇ ಭಕ್ತಿ ಪರಂಪರೆಯ ವೈಶಿಷ್ಟ್ಯತೆ.

ಭಕ್ತಿ ಪರಂಪರೆ ಎಂದಾಕ್ಷಣ ನೆನಪಿಗೆ ಬರುವುದು ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪರಂಪರೆ. ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯ ಪರಂಪರೆಗಳೆರಡೂ ಕೂಡಾ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪಾರ. ಭಕ್ತಿ ಪರಂಪರೆ ಎನ್ನುವುದು ಇವಿಷ್ಟಕ್ಕೆ ಮಾತ್ರ ಸೀಮಿತವಾಗದೆ ಜನರ ನಂಬಿಕೆ, ಆಚರಣೆಗಳನ್ನೂ ಕೂಡಾ ಒಳಗೊಂಡಿರುವುದನ್ನು ಗಮನಿಸಲೇ ಬೇಕು. ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಕೂಡಾ ನಂಬಿಕೆ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಹಿನ್ನೆಲೆಯಿಂದ ಶ್ರೀದೇವೀ ಮಹಾತ್ಮೆ ಕಥನ ಪರಂಪರೆಯನ್ನು ಭಾರತೀಯ ಭಕ್ತಿ ಪರಂಪರೆಯ ಜೊತೆಗಿಟ್ಟು ಅಧ್ಯಯನ ನಡೆಸುವುದು ಈ ಲೇಖನದ ಉದ್ದೇಶ. ಶಾಕ್ತ್ಯ ಪರಂಪರೆ, ಪುರಾಣ, ಆರಾಧನೆ, ಸಾಹಿತ್ಯ ಮತ್ತು ಯಕ್ಷಗಾನ ಮೊದಲಾದ ಪ್ರಕಾರಗಳಲ್ಲಿ ದೇವೀ ಮಹಾತ್ಮೆಯ ಕಥೆ ಬೆಳೆದುಬಂದ ಬಗೆಯನ್ನು ಈ ಲೇಖನ ವಿಶ್ಲೇಷಿಸಿದೆ.

**KEYWORDS:**

ಶ್ರೀದೇವೀ ಮಹಾತ್ಮೆ, ಭಕ್ತಿ ಪರಂಪರೆ, ಶಾಕ್ತ್ಯ ಪರಂಪರೆ, ಪುರಾಣ, ಸಾಹಿತ್ಯ, ಯಕ್ಷಗಾನ.

**ಭಕ್ತಿ ಪರಂಪರೆ :**

ನಮ್ಮ ಸಂಸ್ಕೃತಿಯಲ್ಲಿ ಹಲವು ರೂಪಗಳೊಂದಿಗೆ, ಹಲವು ಮಾರ್ಪಾಡುಗಳೊಂದಿಗೆ ಭಕ್ತಿ ಪರಂಪರೆಯು ನಾಡಿನಾದ್ಯಂತ ಹಬ್ಬಿಕೊಂಡು ಬಂದಿದೆ. ಸಾಹಿತ್ಯಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಭಕ್ತಿ ಪರಂಪರೆಯು ಹಲವು ಆಯಾಮಗಳಲ್ಲಿ ಬಹುಮುಖ್ಯ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಇದರಿಂದಾಗಿ ಜನಸಾಮಾನ್ಯರಲ್ಲಿರುವ ಭಕ್ತಿಯ ಭಾವ ಹಲವಾರು ವಿಧಾನಗಳ ಮೂಲಕ ಪ್ರಕಟಗೊಳ್ಳುತ್ತದೆ. ದೇವರನ್ನು ಪ್ರೀತಿಯಿಂದ, ಶ್ರದ್ಧಾ-ಭಕ್ತಿಯಿಂದ, ಆತ ನಮ್ಮವನೇ ಎಂಬ ಸಲಿಗೆಯಿಂದ, ಸಮರ್ಪಣಾ ಭಾವದಿಂದ ಹಲವರು ಹಲವು ರೀತಿಯಲ್ಲಿ ಒಲಿಸಿಕೊಳ್ಳುವ, ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನ ಭಕ್ತಿ ಪರಂಪರೆಯ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ಹೇಳುತ್ತದೆ. ದೇವರ ಅನುಗ್ರಹಕ್ಕಾಗಿ ಜನರು ಇಂತಹ ವಿವಿಧ ಭಕ್ತಿ ಮಾರ್ಗದ ಮೂಲಕ ಪ್ರಯತ್ನಿಸುವುದೇ ಭಕ್ತಿ ಪರಂಪರೆಯ ವೈಶಿಷ್ಟ್ಯತೆ.

ಭಕ್ತಿ ಪರಂಪರೆ ಎಂದಾಕ್ಷಣ ನೆನಪಿಗೆ ಬರುವುದು ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪರಂಪರೆ. ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯ ಪರಂಪರೆಗಳೆರಡೂ ಕೂಡಾ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪಾರ. ಭಕ್ತಿ ಪರಂಪರೆ ಎನ್ನುವುದು ಇವಿಷ್ಟಕ್ಕೆ ಮಾತ್ರ ಸೀಮಿತವಾಗದೆ ಜನರ ನಂಬಿಕೆ, ಆಚರಣೆಗಳನ್ನೂ ಕೂಡಾ ಒಳಗೊಂಡಿರುವುದನ್ನು ಗಮನಿಸಲೇ ಬೇಕು. ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಕೂಡಾ ನಂಬಿಕೆ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಂಬಿಕೆಯ ಹಲವು ವಿಧಾನಗಳಲ್ಲಿ ಭಕ್ತಿಮಾರ್ಗವೂ ಒಂದು. ಈ ನಂಬಿಕೆ, ಆಚರಣೆಗಳು ಭಕ್ತರನ್ನು ಹಲವು ಕಷ್ಟ, ಕಾರ್ಪಣ್ಯಗಳನ್ನು ಸಹಿಸುವ ಮನೋಧೈರ್ಯ-ಸ್ಥೈರ್ಯಗಳನ್ನು ತಂದೀಯುತ್ತವೆ. ವಿಪತ್ ಪರಂಪರೆಗಳಿಂದ ಪಾರು ಮಾಡುತ್ತವೆ. ದೇವರ ಮೇಲಿನ ಭಯ-ಭಕ್ತಿ ಉಳ್ಳವರು ಪ್ರತೀ ಸಂದರ್ಭದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಪೂಜಿಸಿ ಆರಾಧಿಸುತ್ತಾರೆ. ಪೂಜೆ, ಆರಾಧನೆಗಳೊಂದಿಗೆ ಸಾಹಿತ್ಯ, ಕಲಾ ಪ್ರಕಾರಗಳೆಲ್ಲವೂ ಕೂಡಾ ಭಕ್ತಿಯ ಅಭಿವ್ಯಕ್ತಿಗೆ ಮಾಧ್ಯಮಗಳು.

**ಭಕ್ತಿ ಮಾರ್ಗದಲ್ಲಿ ಶಾಕ್ತ್ಯ ಪರಂಪರೆ:**

ಭಕ್ತಿ ಪರಂಪರೆಯಲ್ಲಿ ಪ್ರತ್ಯೇಕ ಸ್ಥಾನವನ್ನು ಪಡೆದುಕೊಳ್ಳುತ್ತಿರುವುದು ಶಾಕ್ತ್ಯ ಪ್ರಧಾನವಾದ ಭಕ್ತಿ. ಶಾಕ್ತ್ಯ ಪ್ರಧಾನ ಪರಂಪರೆಯ ಮೂಲಕ ದೇವರನ್ನು ಅನಾದಿ ಕಾಲದಿಂದಲೂ ಆರಾಧಿಸಿಕೊಂಡು ಬಂದಿರುವ ನಮ್ಮ ಸಂಸ್ಕೃತಿಯಲ್ಲಿ ಹಲವು ರೀತಿಯಿಂದ ಹಾಗೂ ಹಲವು ರೂಪಗಳಿಂದ ಶಕ್ತಿಯನ್ನು ಭಕ್ತಿ ಪ್ರಧಾನವಾಗಿ ಪೂಜಿಸಿಕೊಂಡು ಬರಲಾಗುತ್ತಿದೆ. ಶಾಕ್ತ್ಯ ಪರಂಪರೆಯಲ್ಲಿ ದೇವಿಯನ್ನು ಶಕ್ತಿ ಸ್ವರೂಪಿಣಿಯಾಗಿ, ದುಷ್ಟ ಸಂಹಾರಕಳಾಗಿ, ಮಾಯೆಯಾಗಿ, ಭಕ್ತರನ್ನು ಅನವರತ ಪೊರೆಯುವಂತಹ ಮಾತೃಹೃದಯಿಯಾಗಿ ಕಾಣುತ್ತಾ ಆಕೆಗೆ ಮಹತ್ವದ ಪೂಜನೀಯ ಸ್ಥಾನವನ್ನು ನಿರಂತರವಾಗಿ ನೀಡುತ್ತಾ ಬರಲಾಗಿದೆ. ಪುರಾಣಗಳ ಪ್ರಕಾರ ಜಗತ್ತಿನ ಸೃಷ್ಟಿಗೆ ಕಾರಣಕರ್ತಳೇ ದೇವಿ. ಆಕೆಯ ಮೂಲಕ ಜನಿಸಿದ ತ್ರಿಮೂರ್ತಿಗಳೆಂದು ಕರೆಯಲ್ಪಡುವ ಬ್ರಹ್ಮ-ವಿಷ್ಣು-ಮಹೇಶ್ವರರು ಆಕೆಯ ಅಣತಿಯಂತೆ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ

ಕಾರ್ಯಗಳನ್ನು ಮಾಡುತ್ತಾ ಬರುತ್ತಿದ್ದಾರೆ. ದೇವಿಯ ಹಲವು ಅವತಾರಗಳ ಕಥೆ, ಲೀಲೆಗಳನ್ನು ವರ್ಣಿಸುವಂತಹ ಕಥಾಗುಚ್ಛವೇ ಶ್ರೀದೇವೀ ಮಹಾತ್ಮೆ. ಈ ಅಧ್ಯಯನದಲ್ಲಿ ಶಾಕ್ತ್ಯ ಪರಂಪರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುವಂತಹ 'ಶ್ರೀದೇವೀ ಮಹಾತ್ಮೆ ಕಥೆ'ಯು ಹೇಗೆ ಬೆಳೆದು ಬಂದಿದೆ ಎನ್ನುವುದನ್ನು ಪುರಾಣಗಳ ಮೂಲಕ, ಆಚರಣೆಗಳ ಮೂಲಕ, ಸಾಹಿತ್ಯಕ ರೂಪದಿಂದ, ಸಾಂಸ್ಕೃತಿಕವಾಗಿ ಮತ್ತು ಪ್ರದರ್ಶನ ಕಲೆಗಳ ಮೂಲಕ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

**ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆ:**

ಭಗವಂತನ ವಿವಿಧ ಗುಣಗಳನ್ನು ಕಥಾ ರೂಪದಲ್ಲಿ ತಿಳಿಸಲಾಗುವ ಒಂದು ವಿಶಿಷ್ಟ ಮಾಧ್ಯಮವೇ ಪುರಾಣಗಳು. ಪುರಾಣಗಳು ಸಾಹಿತ್ಯ ಕ್ಷೇತ್ರಕ್ಕೆ ಬಹು ದೊಡ್ಡ ಕೊಡುಗೆ. ಅನೇಕ ಕಥೆಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ತಲುಪಿಸುವ ಕೆಲಸವನ್ನು ಪುರಾಣಗಳು ಮಾಡುತ್ತವೆ. ಇಂತಹ ಪುರಾಣಗಳಲ್ಲಿ ಕಾಣಸಿಗುವಂತಹ ಶಾಕ್ತ್ಯ ಪ್ರಧಾನವಾದ ಭಕ್ತಿ ಪರಂಪರೆಯಲ್ಲಿ ಮುಖ್ಯವಾಗಿ ಬರುವಂತಹ ಕಥೆ ಶ್ರೀದೇವಿಯ ಮಹಾತ್ಮೆ. ದೇವಿಯ ಕಥೆಯು ಸಾಹಿತ್ಯಕವಾಗಿಯೂ, ಆರಾಧನಾ ಸ್ವರೂಪದಿಂದಲೂ, ಕಲಾ ಮಾಧ್ಯಮದ ಮೂಲಕವೂ ಜನಜೀವನದಲ್ಲಿ ಭಕ್ತಿಯ ಉತ್ಕೃಷ್ಟತೆಯನ್ನು ಬಿತ್ತುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಮಹಾಪುರಾಣಗಳಲ್ಲಿ ಒಂದಾದ ವೇದವ್ಯಾಸ ವಿಚರಿತ ಮಾರ್ಕಾಂಡೇಯ ಪುರಾಣವು ದೇವಿಯ ಕಥೆಯನ್ನು ಒಳಗೊಂಡ ಮೂಲ ಗ್ರಂಥವೆಂದು ತಿಳಿದು ಬರುತ್ತದೆ. ಈ ಗ್ರಂಥದಲ್ಲಿ 134 ಅಧ್ಯಾಯಗಳಿದ್ದು 78 ನೇ ಅಧ್ಯಾಯದಿಂದ 90 ನೇ ಅಧ್ಯಾಯದವರೆಗೆ 13 ಅಧ್ಯಾಯಗಳು ಶ್ರೀದೇವೀ ಮಹಾತ್ಮೆಯ ಕಥೆಯನ್ನು ಒಳಗೊಂಡಿದೆ. ಶ್ರೀದೇವೀ ಮಹಾತ್ಮೆಯ ಈ ಕಥೆಯನ್ನು 'ಸಪ್ತಶತೀ ಪ್ರಸಂಗ'ವೆಂದು ಹೇಳಲಾಗಿದೆ. ಇದರಲ್ಲಿ ದೇವಿಯು ಹಲವಾರು ರೂಪಗಳನ್ನು ತಾಳಿ ರಾಕ್ಷಸರ ಸಂಹಾರ ಮಾಡುತ್ತಾಳೆ.

ಈ ಪುರಾಣದಲ್ಲಿ ಮಾತ್ರವಲ್ಲದೆ, ಇದೇ ಶ್ರೀದೇವಿಯ ಕಥೆಯು ವೇದವ್ಯಾಸ ವಿರಚಿತ ಪುರಾಣಗಳಾದ ಶ್ರೀಮದ್ ದೇವೀಭಾಗವತ, ಶಿವಪುರಾಣಂ, ಶ್ರೀತ್ರಿಪುರಾರಹಸ್ಯ, ಶ್ರೀ ಕಾಳಿಕಾಪುರಾಣ, ಮಹಾಭಾರತ, ಶ್ರೀ ಲಿಂಗಪುರಾಣಂ, ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣಂ, ಶ್ರೀ ಸ್ಕಾಂದಮಹಾಪುರಾಣಂ, ಶ್ರೀ ಗಣೇಶಪುರಾಣಂ, ಶ್ರೀ ಸೌರಪುರಾಣಂ, ಶ್ರೀ ವಾಮನಪುರಾಣಂ ಮುಂತಾದವುಗಳಲ್ಲಿಯೂ ಕೂಡಾ ಶ್ರೀದೇವಿಯ ಕಥೆಯನ್ನು, ಆಕೆಯ ಲೀಲಾವಿಲಾಸಗಳನ್ನು ಕೊಂಡಾಡಿರುವುದರಿಂದ ಶ್ರೀದೇವಿಯ ಕಥೆಯು ಪುರಾಣಗಳಲ್ಲಿ ಎಷ್ಟು ಮಹತ್ವವನ್ನು ಪಡೆದುಕೊಳ್ಳುತ್ತದೆ ಎಂಬುದಾಗಿಯೂ, ಅದನ್ನು ಲೋಕಕ್ಕೆ ಸಾರಿ ಆ ದೇವಿಯ ಕಥೆಯನ್ನು ಎಲ್ಲರೂ ತಿಳಿದುಕೊಳ್ಳಬೇಕೆಂಬ ಕವಿಯ ಉದ್ದೇಶವನ್ನೂ ಅರಿಯಬಹುದಾಗಿದೆ.

ಭಕ್ತಿಯೇ ಪ್ರಧಾನವಾಗಿರುವಂತಹ ಈ ಕಥೆಯಲ್ಲಿ ರಾಕ್ಷಸರಾದಂತಹ, ಲೋಕಕ್ಕೆ ಕಂಟಕರಾಗಿ ವರ್ತಿಸುತ್ತಿದ್ದಂತಹ ಮಹಿಷಾಸುರ, ಚಂಡ-ಮುಂಡರು, ಧೂಮ್ರಾಕ್ಷ, ರಕ್ತಬೀಜ, ಶುಂಭ-ನಿಶುಂಭ ಮುಂತಾದ ದಾನವರು ಬ್ರಹ್ಮನನ್ನೋ, ಹರನನ್ನೋ ತಪಸ್ಸಿನ ಮೂಲಕ

ಮೆಚ್ಚಿಸಿ ಅಜೇಯವಾದ ವರಗಳನ್ನು ಪಡೆದು, ಅಸುರವೀರರನ್ನು ಜತೆ ಸೇರಿಸಿಕೊಂಡು ದೇವಲೋಕಕ್ಕೆ ಧಾಳಿಯನ್ನು ಮಾಡಿ ಅರಸನಾದಂತಹ ದೇವೇಂದ್ರನನ್ನು ಸೋಲಿಸಿದಾಗ, ದೇವೇಂದ್ರನು ದೇವತೆಗಳನ್ನೆಲ್ಲಾ ಕೂಡಿಕೊಂಡು ಪರಾಶಕ್ತಿಯಾದ ಶ್ರೀದೇವಿಯನ್ನು ಸ್ತುತಿಸುತ್ತಾನೆ. ಅನವರತವೂ ತನ್ನ ಭಕ್ತರನ್ನು ಪೊರೆಯುವಂತಹ ದೇವಿಯು ಪ್ರತ್ಯಕ್ಷಗೊಂಡು ದೇವತೆಗಳಿಗೆ ಅಭಯವನ್ನು ನೀಡಿ, ಮಹಿಷಾಸುರನನ್ನು ಸಿಂಹವಾಹಿನಿಯೂ ಅಷ್ಟಭುಜೆಯೂ ಆಗಿ, ಚಂಡಮುಂಡರನ್ನು ಚಂಡಿಕೆಯಾಗಿ, ಧೂಮ್ರಾಕ್ಷನನ್ನು ಕೇವಲ ಹೂಂಕಾರ ಮಾತ್ರದಿಂದ, ರಕ್ತಬೀಜನನ್ನು ರಕ್ತೇಶ್ವರಿಯಾಗಿ, ಶುಂಭ-ನಿಶುಂಭರನ್ನು ಶಾಂಭವಿಯಾಗಿ ಮತ್ತು ಇವರೊಂದಿಗೆ ಇನ್ನೂ ಹಲವಾರು ಬಲಶಾಲಿ ರಕ್ಕಸರನ್ನು ಅಯೋನಿಜೆಯಾದ ದೇವಿಯು ಸಂಹರಿಸಿ ಸರ್ವರನ್ನು ಪೊರೆಯುತ್ತಾಳೆ. ದೇವಿಯನ್ನು ಕೇವಲ ಒಬ್ಬ ನಾರಿ ಎಂದು ತಿಳಿದು ಅಹಂಕಾರದಿಂದ ಮೆರೆದಂತಹ ರಕ್ಕಸರಿಗೆ ನಾರಿ ಶಕ್ತಿ ಏನೆಂಬುದನ್ನು ತೋರಿಸಿಕೊಡುತ್ತಾಳೆ ಮತ್ತು ಅವರ ಪಾಲಿಗೆ ಮಾರಿಯಾಗುತ್ತಾಳೆ. ದುಷ್ಟಶಿಕ್ಷಕಿಯಾಗುವುದರೊಂದಿಗೆ ತನಗೆ ಶರಣಾಗಿ ಬಂದವರನ್ನು ಸದಾ ಪೊರೆದು ಭಕ್ತರಕ್ಷಕಿಯಾಗಿಯೂ ಗೋಚರಿಸುತ್ತಾಳೆ. ದುಷ್ಟರಾಗಿ ಲೋಕಕ್ಕೆ ಪೀಡನೆಯನ್ನು ಕೊಡುವವರು ಕೆಲಕಾಲ ಅಹಂಕಾರದಿಂದ ಮೆರೆದರೂ ಒಂದಲ್ಲಾ ಒಂದು ರೀತಿಯಲ್ಲಿ ಅವರ ದುಷ್ಟತನ ಕೊನೆಗೊಳ್ಳಲೇ ಬೇಕಾಗುತ್ತದೆ ಎಂಬ ತತ್ವವನ್ನು ಸಾರ್ವಕಾಲಿಕವಾಗಿ ಈ ಕಥೆಯು ಎತ್ತಿ ಹಿಡಿಯುತ್ತದೆ.

ಈ ಎಲ್ಲಾ ಪುರಾಣಗಳನ್ನು ಗಮನಿಸಿದರೆ ಅತಿದುಷ್ಟರಾದ ರಾಕ್ಷಸರು ಕೂಡಾ ಭಕ್ತಿಯ ಪರಾಕಾಷ್ಟೆಯನ್ನು ತಲುಪಿ ಮೆರೆದಾಗ ಬ್ರಹ್ಮ, ಶಿವ ಮುಂತಾದ ದೈವಶಕ್ತಿಗಳು ಅವರಿಗೆ ವರವಿತ್ತು ಅನುಗ್ರಹಿಸಿದುದನ್ನು ಕಾಣಬಹುದು. ಆದರೆ ಪಡೆದ ವರಬಲವನ್ನು ದುರ್ವಿನಿಯೋಗಗೊಳಿಸಿದಾಗ, ಅದೇ ದೈವಶಕ್ತಿಗಳು ತಾವು ಕೊಟ್ಟ ಶಾಪಕ್ಕೆ ಪರಿಮಾರ್ಜನೆಯನ್ನು ಒದಗಿಸಲಾಗದ ಸಂದರ್ಭದಲ್ಲಿ ಅವರಿಗೂ ಮಾತೃಸ್ವರೂಪಿಣಿಯಾದ ದೇವಿಯೇ ವಿವಿಧ ಅವತಾರಗಳನ್ನೆತ್ತಿ ಬಂದು ಮುನಿದು ಶಿಕ್ಷಿಸಿದುದನ್ನು ಕಾಣಬಹುದು. ಹೀಗೆ ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆಯನ್ನು ಬೇರೆ ಬೇರೆ ಕಥೆಗಳ ಮೂಲಕ ಸಾರಿ ಕೊಂಡಾಡಲಾಗಿದೆ.

**ದೇವಿಯ ಆರಾಧನೆ:**

ಈ ಕಥೆಯ ಮೂಲಕ ದೇವಿಯ ಆರಾಧನೆಯು ಹಲವಾರು ವಿಧಾನಗಳಲ್ಲಿ ದೇಶದೆಲ್ಲೆಡೆ ನಡೆದುಕೊಂಡು ಬರುತ್ತಿದೆ. ಭಕ್ತಿ ಪಂಥದ ಎಲ್ಲೆಡೆ ಸಾಮಾನ್ಯವಾಗಿ ಶಿವ, ಕೃಷ್ಣನ ಕುರಿತಾದ ಸಾಹಿತ್ಯವು ಕಂಡು ಬರುತ್ತದೆ. ಆದರೆ ಅದರೊಂದಿಗೆ ಅನಾದಿ ಕಾಲದಿಂದಲೂ ವಿಷ್ಣು ಹಾಗೂ ಶಿವನ ಭಕ್ತಿಯ ಜೊತೆಜೊತೆಗೆಯೇ ಈ ಇಬ್ಬರಿಗೂ ಮಾತೃ ಸ್ವರೂಪಿಣಿಯಾದ ದೇವಿಯ ಆರಾಧನೆಯೂ ನಡೆದುಕೊಂಡು ಬಂದಿರುವುದು ಗಮನಿಸಲೇ ಬೇಕಾದ ವಿಷಯ. ನಮ್ಮ ಸಂಸ್ಕೃತಿಯಲ್ಲಿ ದೇವನೊಬ್ಬ ನಾಮ ಹಲವು ಎಂಬಂತೆ ದೇವಿಯನ್ನು ಕೂಡಾ ಹಲವೆಡೆ ಹಲವು ಹೆಸರುಗಳೊಂದಿಗೆ ಪೂಜಿಸುತ್ತಾರೆ. ದೇಶದೆಲ್ಲೆಡೆ ಆಚರಿಸುವಂತಹ ನವರಾತ್ರಿ, ಹಬ್ಬವು ಇದೇ ಶಕ್ತಿ ಸ್ವರೂಪಿಣಿ ದೇವಿಯು ಹಲವು

ಅವತಾರಗಳನ್ನು ಎತ್ತಿ, ಒಂಬತ್ತು ದಿನಗಳ ಕಾಲ ಮಹಿಷಾಸುರನೇ ಮೊದಲಾದ ಅನೇಕ ರಾಕ್ಷಸರನ್ನು ಸಂಹರಿಸಿ ಲೋಕಕಲ್ಯಾಣವನ್ನು ಮಾಡಿರುವುದರ ಆಚರಣೆ. ನವರಾತ್ರಿಯನ್ನು ದೇಶದೆಲ್ಲೆಡೆ ಹಲವು ರೀತಿಯಲ್ಲಿ ವೈಭವದಿಂದ ಆಚರಿಸಲಾಗುತ್ತದೆ. ದೇಶದ ವಿವಿಧ ಭಾಗಗಳಾದ, ಕರ್ನಾಟಕದಲ್ಲಿ ದಸರಾ ಎಂದೂ, ಗುಜರಾತ್ ಕಡೆಯಲ್ಲಿ ಗರ್ಬಾ ಮತ್ತು ದಾಂಡಿಯಾ ರಾಸ್ ನೃತ್ಯದ ಮೂಲಕ, ಕೋಲ್ಕತ್ತಾ ಕಡೆಯಲ್ಲಿ ದುರ್ಗಾ ಪೂಜಾ ಎಂದೂ ನವರಾತ್ರಿಯನ್ನು ಆಚರಿಸಲಾಗುತ್ತದೆ. ಇಲ್ಲಿ ಮೂಲವಾಗಿ ನವರಾತ್ರಿಯಲ್ಲಿ ದೇವಿಯ ಆರಾಧನೆ ನಡೆದರೂ ಕೂಡಾ ಸಾಂಸ್ಕೃತಿಕವಾಗಿ ಆಚರಣೆಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು.

ಕಾಳಿ, ದುರ್ಗೆ, ರಾಜರಾಜೇಶ್ವರಿ, ಪಾರ್ವತಿ, ಮೂಕಾಂಬಿಕಾ, ಭ್ರಾಮರಿ, ಸಪ್ತಮಾತೃಕೆಯರಾದ ಬ್ರಹ್ಮಾಣಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಾ ಮುಂತಾದ ದೇವಿಯ ಹಲವು ರೂಪಗಳ ಮೂಲಕ ಹಲವಾರು ದೇವಾಲಯಗಳಲ್ಲಿ ದೇವಿಯು ನಿತ್ಯ ಪೂಜೆಗೆ ಪಾತ್ರಳಾಗುತ್ತಾಳೆ.

ಇಂದಿಗೂ ಕೂಡಾ ಕೇವಲ ದೇವಾಲಯಗಳಲ್ಲಿ ಮಾತ್ರ ದೇವಿಯ ಆರಾಧನೆ ನಡೆಯುವುದಲ್ಲದೆ, ಹಲವು ಮನೆಗಳಲ್ಲಿ ಸಪ್ತಶತೀ ಪಾರಾಯಣ ನಡೆಯುವುದರೊಂದಿಗೆ, ಈ ಪವಿತ್ರ ಗ್ರಂಥದ ಮೂಲಕ ದೇವಿಗೆ ಪೂಜೆ ನಡೆಯುತ್ತಾ ಬಂದಿದೆ. ದೇವಿಯನ್ನು ಮಾಯೆಯೆಂದೂ ಹೇಳಲಾಗುತ್ತದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಸಪ್ತಶತೀ ಗ್ರಂಥವನ್ನು ಪಾರಾಯಣಕ್ಕೆ ಬಳಸಿದರೆ, ಉತ್ತರ ಕರ್ನಾಟಕದ ಹಲವೆಡೆ ಚಿದಾನಂದಾವಧೂತರ ದೇವೀ ಮಹಾತ್ಮೆಯನ್ನು ಪಾರಾಯಣ ಗ್ರಂಥವಾಗಿ ಆರಾಧಿಸಲಾಗುತ್ತದೆ. ಚಿದಾನಂದಾವಧೂತರ ಈ ಕಾವ್ಯವನ್ನು ಪಾರ್ವತೀ ಮಹಾತ್ಮೆ, ಅಂಬಾಪುರಾಣ, ಕಾಳಿಕಾ ಪುರಾಣವೆಂದೂ ಕರೆಯಲಾಗುತ್ತದೆ. ಸಾಹಿತ್ಯಿಕವಾಗಿ ಉನ್ನತ ಸ್ಥಾನದಲ್ಲಿ ನಿಲ್ಲುವಂತಹ ಈ ಸಪ್ತಶತೀ ಗ್ರಂಥವು ಆರಾಧನಾ ಮೌಲ್ಯವನ್ನು ಕೂಡಾ ಒಳಗೊಂಡಿರುವುದನ್ನು ಕಾಣಬಹುದು.

**ಸಾಹಿತ್ಯಕವಾಗಿ ಶ್ರೀದೇವೀ ಮಹಾತ್ಮೆ:**

ಈ ಮೊದಲು ತಿಳಿಸಿರುವಂತಹ ಪುರಾಣ ಗ್ರಂಥಗಳಿಗೆ ಮಾತ್ರ ಸೀಮಿತವಾಗದೇ ಕನ್ನಡದಲ್ಲಿ ರಚಿತವಾಗಿರುವ ಪುರಾಣಗಳನ್ನು ಸಾರುವ ಗ್ರಂಥಗಳಾದ ಚಿದಾನಂದಾವಧೂತ ವಿರಚಿತ ದೇವೀ ಮಹಾತ್ಮೆ, ವಚನ ದೇವೀ ಮಹಾತ್ಮೆ, ಜಿ. ಪರಮೇಶ್ವರ ಭಟ್ ಅವರ ವಾರ್ಧಕ ಷಟ್ಪದಿಯಲ್ಲಿರುವಂತಹ ಕನ್ನಡ ದೇವೀ ಮಹಾತ್ಮೆ, ಪೊಳಲಿ ಶಾಸ್ತ್ರಿ ವಿರಚಿತ ಶ್ರೀದೇವೀ ಮಹಾತ್ಮ್ಯೆ, ವಿದ್ವಾನ್ ಅಮ್ಮೆಂಬಳ ಅನಂತಯ್ಯ ನಾವಡರ ಶ್ರೀದೇವೀ ಮಹಾತ್ಮೆಯ ದಿವ್ಯಕಥೆ, ಎನ್. ಕೇ. ಹೆಗಡೆಯವರ ದೇವೀ ಮಹಾತ್ಮೆ, ವಿದ್ವಾನ್ ಶ್ರೀ ಪೆರಡಾಲ ಕೃಷ್ಣಯ್ಯನವರು ಸಂಪಾದಿಸಿರುವಂತಹ ಮಾರ್ಕಾಂಡೇಯ ಪುರಾಣಾಂತರ್ಗತ ಶ್ರೀ ದೇವೀ ಮಹಾತ್ಮೆ ಮುಂತಾದ ಗ್ರಂಥಗಳಲ್ಲಿಯೂ ದೇವಿಯ ಕತೆ ಉಪಲಬ್ಧವಿರುವುದನ್ನು ಕಾಣಬಹುದು. ಈ ಎರಡು ಭಾಷೆಗಳಲ್ಲಿ ಮಾತ್ರವಲ್ಲದೇ ಇನ್ನೂ ಹಲವಾರು ಪ್ರಾದೇಶಿಕ ಭಾಷೆಗಳಲ್ಲಿಯೂ ಕೂಡಾ ಶ್ರೀದೇವೀ ಮಹಾತ್ಮೆ ಕಥೆ ಹಲವು ಸಾಹಿತ್ಯಕ ರೂಪದಿಂದ ಹೊರಬಂದಿದೆ.

ಸಾಹಿತ್ಯಕವಾಗಿ ಷಟ್ಪದಿ ಕಾವ್ಯಗಳಾಗಿ, ಗದ್ಯ ಕೃತಿಗಳಾಗಿ ಮಾತ್ರವೇ ದೇವೀ ಮಹಾತ್ಮೆ ಕೃತಿಯು ಹೊರಬಂದಿರುವುದಲ್ಲದೆ ಸಾಹಿತ್ಯಕ್ಕೂ , ಪುರಾಣಕ್ಕೂ ಹೊಸ ಆಯಾಮವನ್ನು ಒದಗಿಸಿಕೊಡುವಂತಹ ಯಕ್ಷಗಾನ ಪ್ರಸಂಗ ಪಠ್ಯಗಳಾಗಿ ಹಲವಾರು ಪ್ರಸಿದ್ಧ ಯಕ್ಷಗಾನ ಕವಿಗಳು ಕೂಡಾ ಈ ಮೊದಲು ತಿಳಿಸಿರುವಂತಹ ದೇವಿಯ ಕಥೆಗೆ ಸಂಬಂಧಿಸಿದ ಪುರಾಣಗಳನ್ನು ಆಧರಿಸಿಕೊಂಡು ಶ್ರೀದೇವೀ ಮಹಾತ್ಮೆ ಪ್ರಸಂಗವನ್ನು ರಚಿಸಿದ್ದಾರೆ. ದೇವೀದಾಸ, ಹಿರಿಯ ಬಲಿಪ ನಾರಾಯಣ ಭಾಗವತರು, ಅಗರಿ ಶ್ರೀನಿವಾಸ ಭಾಗವತರು, ಕಿರಿಯ ಬಲಿಪ ನಾರಾಯಣ ಭಾಗವತರು, ಪುತ್ತೂರು ಈಶ್ವರಪ್ಪಯ್ಯನವರು (ಸಂಗ್ರಹ), ಅಡೂರು ವಿಷ್ಣಯ್ಯ, ವಿದ್ವಾನ್ ಡಿ. ವಿ. ಹೊಳ್ಳ, ಕೆ. ಮುಖ್ಯಪ್ರಾಣ ಉಪಾಧ್ಯಾಯ, ಕೆ. ರಾಮಯ್ಯ ಭಟ್ಟ ಎಡನಾಡು, ಶ್ರೀ ವಿ. ಕೈ. ಕೃಷ್ಣಕುಮಾರಾಚಾರ್ಯ ಹೀಗೆ ಹಲವಾರು ಕವಿಗಳು ಶ್ರೀದೇವೀ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ರಚಿಸಿದ್ದಾರೆ. ಈ ದೇವೀ ಮಹಾತ್ಮೆಯ ಕಥೆಯು ಕೇವಲ ಪುಸ್ತಕ ರೂಪದಲ್ಲಿ ಮಾತ್ರ ಲಭ್ಯವಿರುವುದಲ್ಲದೆ ಅನೇಕ ವರ್ಷಗಳ ಹಿಂದಿನ ತಾಳೆಗರಿಗಳಲ್ಲಿಯೂ ಕೂಡಾ ಸಪ್ತಶತೀ ಗ್ರಂಥದ ಶ್ರೀದೇವಿ ಮಹಾತ್ಮೆಯ ಪ್ರತಿಗಳು ಲಭ್ಯವಿದೆ.

**ಯಕ್ಷಗಾನದಲ್ಲಿ ಶ್ರೀದೇವೀ ಮಹಾತ್ಮೆ:**

ಕರಾವಳಿಯಲ್ಲಿ ದೇವಿಯ ಆರಾಧನೆ ಮಗದೊಂದು ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ ಕಲಾ ಮಾಧ್ಯಮದ ಮೂಲಕ ನಡೆಯುತ್ತದೆ. ಪ್ರದರ್ಶನ ಕಲೆಗಳು ಅತ್ಯುತ್ತಮ ಸಂವಹನ ಮಾಧ್ಯಮ. ಸಾಮಾನ್ಯ ಜನರನ್ನು ವಚನಗಳು, ದಾಸರ ಕೀರ್ತನೆಗಳು ಆಡು ಭಾಷೆಯಲ್ಲಿದ್ದ ಕಾರಣ ಹೇಗೆ ಸುಲಭವಾಗಿ ತಲುಪಿತೋ ಅದೇ ರೀತಿಯಲ್ಲಿ ಅತ್ಯಂತ ಪ್ರಬಲವಾಗಿ ಜನರನ್ನು ತಲುಪುವುದು ಆಯಾ ಪ್ರದೇಶದಲ್ಲಿ ಬಳಕೆಯಲ್ಲಿರುವಂತಹ ಕಲೆಗಳು. ಇಂತಹ ಕಲಾಮಾಧ್ಯಮದಲ್ಲಿ ಒಂದು, ಕರಾವಳಿಯ ಗಂಡು ಕಲೆ ಎನಿಸಿಕೊಂಡಿರುವಂತಹ ಯಕ್ಷಗಾನ.

ಯಕ್ಷಗಾನದ ಎರಡು ಪ್ರಕಾರಗಳಾದ ತೆಂಕುತಿಟ್ಟು ಮತ್ತು ಬಡಗುತಿಟ್ಟಿನಲ್ಲಿರುವ ಮೇಳಗಳಲ್ಲಿ ವರ್ಷದ ಒಂದು ತಿರುಗಾಟದಲ್ಲಿ ಉಳಿದ ಎಲ್ಲಾ ಪ್ರಸಂಗಗಳಿಗೆ ಹೋಲಿಸಿ ನೋಡಿದರೆ ಅತ್ಯಧಿಕ ಪ್ರದರ್ಶನಗೊಳ್ಳುವಂತಹ ಪ್ರಸಂಗ ಶ್ರೀದೇವೀ ಮಹಾತ್ಮೆ. ಹಿಂದೆ ಯಕ್ಷಗಾನದಲ್ಲಿ ಪೌರಾಣಿಕವಾಗಿ ಕೇವಲ ರಾಮಾಯಣ, ಮಹಾಭಾರತ, ಭಾಗವತ ಕಥೆಗಳನ್ನೇ ಹೆಚ್ಚಾಗಿ ಆಡಲಾಗುತ್ತಿತ್ತು. ನಂತರ ಪರಾಶಕ್ತಿಯಾದಂತಹ, ತ್ರಿಮೂರ್ತಿಗಳ ಹುಟ್ಟಿಗೆ ಕಾರಣಳಾದಂತಹ ದೇವಿಯ ಕಥೆಯನ್ನು ಆಡುವುದಕ್ಕೆ ಪ್ರಾರಂಭಿಸಿದರು. ದೇವಿಯ ಈ ಕಥಾನಕವು ಅತ್ಯಧಿಕ ಪ್ರದರ್ಶನಗೊಳ್ಳುವುದಕ್ಕೆ ಕಾರಣ ಭಕ್ತಾದಿಗಳ ಹರಕೆ. ಹರಕೆಯಲ್ಲದೆ ಕೂಡಾ ದೇವೀ ಮಹಾತ್ಮೆ ಪ್ರಸಂಗವು ಪ್ರದರ್ಶನಗೊಳ್ಳುತ್ತದೆ. ಆದರೆ ಪ್ರಮುಖವಾಗಿ ಕಟೀಲು, ಮಂದಾರ್ತಿಯಂತಹ ಕ್ಷೇತ್ರಕ್ಕೆ ಹರಕೆ ಸಲ್ಲಿಸುವಂತಹ ಭಕ್ತಾದಿಗಳು ಆ ಕ್ಷೇತ್ರದಿಂದ ಹೊರಡುವಂತಹ ಮೇಳಗಳ ಮೂಲಕ ಹೆಚ್ಚಾಗಿ ದೇವೀ ಮಹಾತ್ಮೆ ಪ್ರಸಂಗದ ಪ್ರದರ್ಶನಕ್ಕಾಗಿ ವೀಳ್ಯವನ್ನು ನೀಡಿ ಹರಕೆಯನ್ನು ಸಂಪೂರ್ಣಗೊಳಿಸುತ್ತಾರೆ. ಈ ಪ್ರಸಂಗವನ್ನು ಆಡಿಸುತ್ತೇವೆ ಎಂದು ಹರಕೆ ಹೊತ್ತುಕೊಳ್ಳುವವರೊಂದಿಗೆ, ಇಂತಿಷ್ಟು ದೇವೀ

ಮಹಾತ್ಮೆ ಪ್ರಸಂಗವನ್ನು ನೋಡುತ್ತೇನೆ ಎಂದೂ ಹರಕೆ ಹೇಳಿಕೊಳ್ಳುವವರೂ ಇದ್ದಾರೆ. ಅನೇಕ ವರ್ಷಗಳಿಂದ ನಿರಂತರವಾಗಿ ಇದೇ ಪ್ರಸಂಗವನ್ನು ತಮ್ಮ ಭಕ್ತಿ ಮತ್ತು ನಂಬಿಕೆಯ ಮೂಲಕ ಆಡಿಸುತ್ತಾ ಬಂದಿರುವವರು ಕೂಡಾ ಇದ್ದಾರೆ. ಈಗ ಅತ್ಯಧಿಕ ಪ್ರದರ್ಶನಗೊಳ್ಳುವಂತಹ ಈ ಕಥಾನಕವನ್ನು ಹಲವು ವರ್ಷಗಳ ಹಿಂದೆ ಪ್ರದರ್ಶಿಸುವವರೂ ಮತ್ತು ಆಡಿಸುವವರೂ ಲೋಪದೋಷಗಳು ಆಗಿಬಂದು ಪಾವಿತ್ರ್ಯತೆಗೆ ಧಕ್ಕೆ ಬಂದರೆ ಎಂದು ಹಿಂಜರಿಯುತ್ತಿದ್ದುದೂ ಇದೆ. ಕಾಲ ಮುಂದುವರಿದಂತೆ ದೇವಿಯ ಆರಾಧನೆ ಹೆಚ್ಚುಗೊಂಡಂತೆ ಹರಕೆ ಪ್ರದರ್ಶನಕ್ಕೆ ಪ್ರಧಾನವಾಗಿ ಈ ಪ್ರಸಂಗ ಬಳಕೆಯಾಗಲು ಆರಂಭವಾಯಿತು.

ಹಿಂದೆ ದೇವೀ ಮಹಾತ್ಮೆ ಪ್ರದರ್ಶನಗೊಳ್ಳಬೇಕೆಂದರೆ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆದು, ಕಲಾವಿದರು ಸಪ್ತಶತೀ ಪಾರಾಯಣ, ಉಪವಾಸವನ್ನು ಮಾಡಿ ನೇಮ-ನಿಷ್ಠೆಗಳೊಂದಿಗೆ ಪ್ರದರ್ಶನವನ್ನು ನೀಡುತ್ತಿದ್ದರು. ಹರಕೆ ಹೊತ್ತವರು ಅನ್ನ ಸಂತರ್ಪಣೆಯನ್ನೂ ಕೂಡಾ ಮಾಡಿಸುತ್ತಾರೆ. ಈಗಲೂ ಕೂಡಾ ಈ ಪ್ರಸಂಗದಲ್ಲಿ ಪ್ರತಿಯೊಬ್ಬ ರಾಕ್ಷಸನ ವಧೆಯಾದಾಗಲೂ ವಧಾ ಶಾಂತಿಗಾಗಿ ಸಾಂಕೇತಿಕವಾಗಿ ಕುಂಬಳಕಾಯಿ ಕಡಿದು, ಅರಳು (ಹೊದಳು) ಹಾಕಿ, ಕುಂಕುಮ ನೀರನ್ನು ಚೆಲ್ಲುವ ಕ್ರಮವು ಹಿಂದಿನಿಂದ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ.

ಈ ಯಕ್ಷಗಾನ ಪ್ರಸಂಗದ ಮೂಲಕ ದೇವಿಯು ಕೇವಲ ದುಷ್ಟಶಿಕ್ಷಕಳಾಗಿ ಮಾತ್ರ ಕಂಡುಬರದೇ ಸುಜ್ಞಾನವನ್ನು ನೀಡುವವಳಾಗಿಯೂ ಗೋಚರಿಸುತ್ತಾಳೆ. ಸಾಕ್ಷಾತ್ ದೇವಿಯೇ ರಂಗಸ್ಥಳದಲ್ಲಿ ಸನ್ನಿಹಿತಳಾಗುತ್ತಾಳೆ ಎಂಬ ಶ್ರದ್ಧೆ, ಪ್ರತೀತಿಗಳು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಪ್ರಸಂಗದ ಇನ್ನೊಂದು ವೈಶಿಷ್ಟ್ಯವೇನೆಂದರೆ ಯಕ್ಷಗಾನದ ಪರಿಭಾಷೆಯಲ್ಲಿ ರಂಗಸ್ಥಳವೆಂದು ಕರೆಯಲ್ಪಡುವ ವೇದಿಕೆಯ ಎಡ ಭಾಗದಲ್ಲಿ ದೇವಿಗಾಗಿ ಪ್ರತ್ಯೇಕ ಸ್ಥಾನವನ್ನು ಮಾಡಿ ಅಲ್ಲಿ ಉಯ್ಯಾಲೆಯನ್ನು ಕಟ್ಟಲಾಗುತ್ತದೆ. ದೇವಿಯು ರಾಕ್ಷಸರನ್ನು ವಧಿಸಲು ತನ್ನ ಮಾಯೆಯ ಮೂಲಕ ತನ್ನ ಬಳಿಗೇ ಕರೆಸಿಕೊಂಡು ಅವರನ್ನು ಶಿಕ್ಷಿಸಬೇಕೆಂದು, ಆಕಾಶದಿಂದ ಇಳಿದು ಬಂದ ಚಿನ್ನದ ಉಯ್ಯಾಲೆಯಲ್ಲಿ ಕುಳಿತುಕೊಳ್ಳುತ್ತಾಳೆ. ಇದನ್ನೇ ಸಾಂಕೇತಿಕವಾಗಿ ಪ್ರದರ್ಶನದಲ್ಲಿಯೂ ತೋರಿಸಲಾಗುತ್ತದೆ. ಈ ತೊಟ್ಟಿಲಿರುವ ಭಾಗವನ್ನು ಹೂಗಳಿಂದ ಅಲಂಕರಿಸಿ ದೇವಿ ಪಾತ್ರಧಾರಿ ಕುಳಿತುಕೊಳ್ಳುವ ಮೊದಲು ತೊಟ್ಟಿಲಿನಲ್ಲಿ ಹಣ್ಣು-ಹಂಪಲುಗಳನ್ನು ದೇವಿಗೆ ನೈವೇದ್ಯಕ್ಕಾಗಿ ಇಡಲಾಗುತ್ತದೆ.

ಈ ಕಥಾ ಪ್ರದರ್ಶನದಲ್ಲಿ ದೇವಿಯ ಹಲವು ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ಪಾತ್ರಧಾರಿಯ ಮೂಲಕ ತೋರಿಸಲಾಗುತ್ತದೆ. ತ್ರಿಮೂರ್ತಿಗಳ ಜನನವಾಗುವಾಗ ಆದಿಮಾಯೆಯಾಗಿ ಕಾಣಿಸಿಕೊಳ್ಳುತ್ತಾಳೆ. ನಂತರ ದುಷ್ಟರ ವಧೆಗಾಗಿ ಹೋಗುವಾಗ ಆಯುಧಪಾಣಿಯಾಗಿ, ಸರ್ವಾಲಂಕಾರ ಭೂಷಿತೆಯಾಗಿರುವ ದೇವಿಯು ಮಹಿಷಾಸುರನ ವಧೆಗಾಗುವಾಗ ಕೈಗಳನ್ನು ಕಟ್ಟಿಕೊಂಡು ಅಷ್ಟಭುಜೆಯಾಗಿ, ಚಂಡ-ಮುಂಡರ ವಧೆಗಾಗುವಾಗ ಕೈಗಳನ್ನು ಕಟ್ಟಿ ರುಂಡಗಳನ್ನು ಧರಿಸಿ, ಕಾಳಿ-ಚಂಡಿಕೆಯಾಗಿ, ರಕ್ತಬೀಜನನ್ನು ಕೊಲ್ಲಲು ತನ್ಮೂಲಕ ಸಪ್ತಮಾತೃಕೆಯರನ್ನು ಸೃಷ್ಟಿಸಿ ನಂತರ ರಕ್ತೇಶ್ವರಿಯಾಗಿ

ಕೆಂಪು ಬಣ್ಣದಿಂದ ಕಂಗೊಳಿಸಿ, ಶುಂಭ-ನಿಶುಂಭರ ವಧೆಗಾಗುವಾಗ ರೌದ್ರ ಶಾಂಭವಿಯಾಗಿ ತೋರಿಸುವ ಮೂಲಕ ದೇವಿಯ ಕತೆಯನ್ನು ಪ್ರತಿಯೊಬ್ಬನಿಗೂ ಮನಮುಟ್ಟುವಂತೆ ಬಿಂಬಿಸಲಾಗುತ್ತದೆ.

ಶ್ರೀದೇವೀ ಮಹಾತ್ಮೆ ಪ್ರಸಂಗವು ಒಂದು ದಿನದ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ ವಿಸ್ತಾರವಾಗಿ ಎರಡು, ಮೂರು, ಐದು, ಏಳು, ಒಂಬತ್ತು ದಿನಗಳವರೆಗೆ ಕೂಡಾ ಈ ಪ್ರಸಂಗವನ್ನು ಆಡಿ ತೋರಿಸಲಾಗುತ್ತದೆ. ಹೀಗಾಗಿ ಈ ಕಥಾನಕವು ಬಹುಮುಖ ಸಾಮರ್ಥ್ಯವನ್ನು ಹೊಂದಿರುವುದನ್ನು ಗಮನಿಸಿಬೇಕು. ಹರಕೆ ಮೇಳಗಳಲ್ಲಿ ಮಾತ್ರವಲ್ಲದೆ ಇತರ ಯಕ್ಷಗಾನ ಮೇಳಗಳಲ್ಲಿಯೂ ಈ ಕಥಾನಕವು ಅನೇಕ ವರ್ಷಗಳಿಂದ ಲೆಕ್ಕವಿಲ್ಲದಷ್ಟು ಪ್ರದರ್ಶನಗಳನ್ನು ಕಂಡಿದ್ದರೂ ಕೂಡಾ ಇಂದಿಗೂ ಅದೇ ರೀತಿಯ ಬೇಡಿಕೆ, ಜನ-ಮನ್ನಣೆ, ಆರಾಧನಾ ಮಹತ್ವಗಳನ್ನು ಉಳಿಸಿಕೊಂಡು ಮುಂದುವರಿಯುತ್ತಾ ಬಂದಿರುವುದರಿಂದಾಗಿ ಹರಕೆಯ ಫಲಾನುಭವಿಗಳು ಸಹಸ್ರಾರು ಸಂಖ್ಯೆಯಲ್ಲಿರುವುದನ್ನು, ಹರಕೆಗಾಗಿ ಈ ಪ್ರಸಂಗವನ್ನು ಆಡಿಸಲು ವರ್ಷಗಳ ಕಾಲ ಕಾಯುವುದನ್ನೂ ಮತ್ತು ಜನಾಕರ್ಷಣೆಯನ್ನು ನಿರಂತರವಾಗಿ ಪ್ರತೀ ವರ್ಷ ಹೆಚ್ಚಿಸಿಕೊಳ್ಳುತ್ತಿರುವುದು ಗಮನಾರ್ಹ ವಿಚಾರ.

**ಇತರ ಕಲಾಮಾಧ್ಯಮದಲ್ಲಿ ಅಭಿವ್ಯಕ್ತಿ:**

ಶ್ರೀದೇವೀ ಮಹಾತ್ಮೆಯ ಕತೆಯು ಇನ್ನಿತರ ಪ್ರದರ್ಶನ ಕಲೆಗಳಾದ ಗೊಂಬೆಯಾಟ, ನೃತ್ಯದ ವಿವಿಧ ಪ್ರಕಾರಗಳಾದ ಭರತನಾಟ್ಯ, ಕಥಕಳಿ, ನಾಟಕ ಮುಂತಾದ ಕಲಾಪ್ರಕಾರಗಳಲ್ಲಿಯೂ ಕೂಡಾ ಬಳಕೆಗೊಂಡು ದೇವಿ ಮಹಾತ್ಮೆಯ ಕಥೆಯನ್ನು ವಿಸ್ತಾರವಾಗಿ ಪ್ರದರ್ಶಿಸಲಾಗುತ್ತದೆ. ಇದರಿಂದಾಗಿ ಈ ಕಥೆಯು ಕೇವಲ ತನ್ನ ಸಾಹಿತ್ಯಕ ಪರಿಧಿಯೊಳಗೆ ಮಾತ್ರ ಇರದೇ ತನ್ನ ವ್ಯಾಪ್ತಿಯನ್ನು ಹಲವು ಕಲಾ ಮಾಧ್ಯಮಗಳ ಮೂಲಕ ವಿಸ್ತರಿಸಿ ನಾಡಿನಾದ್ಯಂತ ಜನರಿಗೆ ಪ್ರಚುರಪಡಿಸುವ ರೀತಿಯನ್ನು ಗಮನಿಸಬಹುದು.

**ಶಾಕ್ತ್ಯ ಪರಂಪರೆಯ ವಿವಿಧ ಆಚರಣೆಗಳು:**

ಹಲವು ದೇವೀ ದೇವಸ್ಥಾನಗಳು ಹಲವು ರೀತಿಯ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿವೆ. ಉದಾಹರಣೆಗೆ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ದೇವಿಯು ಭದ್ರಕಾಳಿ ರೂಪದಲ್ಲಿ ಚಂಡ-ಮುಂಡರ ಶಿರ ಕಡಿದು ಚೆಂಡಾಡಿದ ನೆನಪಿಗಾಗಿ ಸಾಂಕೇತಿಕವಾಗಿ ವರ್ಷವೂ ಚೆಂಡಾಟ ನಡೆಯುತ್ತದೆ. ದುರ್ಗಾಪರಮೇಶ್ವರಿ ದೇವಸ್ಥಾನ ಬಪ್ಪನಾಡು ಇಲ್ಲಿ ದೇವಿಗೆ ಮಲ್ಲಿಗೆ ಸಮರ್ಪಣೆ ಮಾಡಿ ಶಯನೋತ್ಸವ ಸೇವೆ ಹೀಗೆ ದೇಶದಾದ್ಯಂತ ಹಲವಾರು ದೇವೀ ದೇವಾಲಯಗಳಲ್ಲಿ ಹಲವು ರೀತಿಯ ಆಚರಣೆಗಳು ನಡೆದುಕೊಂಡು ಬಂದಿವೆ.

**ಭಕ್ತಿ ಪರಂಪರೆಗೆ ಶಾಕ್ತ್ಯ ಪರಂಪರೆಯ ಮೂಲಕ ಶ್ರೀದೇವೀ ಮಹಾತ್ಮೆ ಕಥಾನಕದ ಕೊಡುಗೆ:**

ಒಟ್ಟಾರೆಯಾಗಿ ಭಕ್ತಿ ಪರಂಪರೆಯ ಕುರಿತಾಗಿ ಹೇಳುವಾಗ ಶ್ರೀದೇವೀ ಮಹಾತ್ಮೆ ಕಥೆಯು ಹೇಗೆ ಉಳಿದ ಕಥೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ ಎಂದು ಗಮನಿಸಬೇಕಾದುದು

ಮುಖ್ಯ ಅಂಶ. ಕೇವಲ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ ನಾಡಿನಾದ್ಯಂತ ಹಲವು ರೀತಿಯ ಆಚರಣೆಗಳ ಮೂಲಕ, ಪ್ರದರ್ಶನ ಕಲೆಗಳ ಮೂಲಕ ಈ ಕತೆಯು ಭಕ್ತಿ ಪರಂಪರೆಗೆ ನಿರಂತರವಾಗಿ ಅನನ್ಯವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ. ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಶಕ್ತಿಯ ಆರಾಧನೆಯು, ಶಾಕ್ತ್ಯ ಭಕ್ತಿ ಪರಂಪರೆಯನ್ನು ಜಗತ್ತಿಗೆ ಸಾರುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತನ್ನ ಛಾಪನ್ನು ಬಲವಾಗಿ ಬೇರೂರಿರುವಂತಹ ಇದು ಸಾಹಿತ್ಯಕ್ಕೂ ಅಪೂರ್ವ ಕೊಡುಗೆಯಾಗಿದೆ.

**ಉಪಸಂಹಾರ:**

ಯಾವನೇ ಒಬ್ಬ ಮನುಷ್ಯನಿಗಾದರೂ ಭಕ್ತಿಯ ಮೂಲಕ ಮೋಕ್ಷವನ್ನು ಹೊಂದುವುದಕ್ಕೆ ಖಂಡಿತಾ ಸಾಧ್ಯವಿದೆ ಎಂದು ಭಕ್ತಿ ಚಳವಳಿಯು ಪ್ರತಿಪಾದಿಸಿತು. ಸಾಮಾನ್ಯ ಜನರಿಗೆ ಜ್ಞಾನವನ್ನು ನೀಡುವುದರೊಂದಿಗೆ ಮೋಕ್ಷ ಮಾರ್ಗವನ್ನೂ ಕೂಡಾ ಬೋಧಿಸಲಾಯಿತು. ಶೈವ ಮತ್ತು ವೈಷ್ಣವ ಪರಂಪರೆಗೆ ಹೆಚ್ಚಿನ ಒತ್ತು ಈ ಚಳವಳಿಯಲ್ಲಿ ಸಿಕ್ಕಿದ್ದರೂ ಕೂಡಾ ಜನರಲ್ಲಿ ಭಕ್ತಿಯನ್ನು ಜಾಗೃತಗೊಳಿಸುವಲ್ಲಿ ಶಾಕ್ತ್ಯ ಪರಂಪರೆಯೂ ಕೂಡಾ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಜಗತ್ತಿನಲ್ಲಿ ಯಾವಾಗ ತಾಮಸಿಕ, ಆಸುರಿ ಮತ್ತು ಕ್ರೂರ ಜನರು ಪ್ರಬಲರಾಗಿ, ಸಾತ್ವಿಕ ಮತ್ತು ಧರ್ಮನಿಷ್ಠ ಸಜ್ಜನರನ್ನು ಪೀಡಿಸುತ್ತಾರೆಯೋ ಆಗ ದೇವಿಯು ಧರ್ಮಸಂಸ್ಥಾಪನೆಗಾಗಿ ಅವತಾರತಾಳುತ್ತಾಳೆ ಎಂಬ ಜನರ ನಂಬಿಕೆಯು ಅನಾದಿ ಕಾಲದಿಂದಲೂ ಬೆಳೆದು ಬಂದಿದೆ. ಹೀಗೆ ಭಕ್ತಿ ಪರಂಪರೆಗೆ ತನ್ನದೇ ಆದ ರೂಪುರೇಷೆಗಳೊಂದಿಗೆ ಶಕ್ತಿ ಆರಾಧನೆಗೆ ಒಳಪಡುವ ಶ್ರೀದೇವೀ ಮಹಾತ್ಮೆ ಕಥೆಯು ಹೇಗೆ ವಿವಿಧ ಆಯಾಮಗಳಾದ ಪುರಾಣಗಳ ಮೂಲಕ, ಆಚರಣೆಗಳ ಮೂಲಕ, ಸಾಹಿತ್ಯಿಕ ರೂಪದಿಂದ, ಸಾಂಸ್ಕೃತಿಕವಾಗಿ ಮತ್ತು ಪ್ರದರ್ಶನ ಕಲೆಗಳ ಮೂಲಕ ಹಲವಾರು ವರ್ಷಗಳಿಂದ ನಮ್ಮ ನಾಡಿನಾದ್ಯಂತ ಹಬ್ಬಿಕೊಂಡು ಬಂದಿದೆ ಎನ್ನುವುದನ್ನು ಈ ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ.

**ಮಾಹಿತಿದಾರರು:**

1. ಸುಣ್ಣಂಬಳ ವಿಶ್ವೇಶ್ವರ ಭಟ್ (ಯಕ್ಷಗಾನ ಕಲಾವಿದರು)
2. ಹಿರಣ್ಯ ವೆಂಕಟೇಶ್ವರ ಭಟ್ (ಸಂಸ್ಕೃತ ವಿದ್ವಾಂಸರು)
3. ಡಾ. ಸಾಯಿಗೀತಾ (ಸಂಶೋಧಕರು & ಪ್ರಾಧ್ಯಾಪಕರು)

## ಪರಾಮರ್ಶನ ಗ್ರಂಥಗಳು:


1. ಅ.ರಾ.ಸೇ. (ಸಂ). (2001). ಚಿದಾನಂದಾವಧೂತ ವಿರಚಿತ ಶ್ರೀದೇವೀಮಹಾತ್ಮೆ. ಕಾಮಧೇನು ಪುಸ್ತಕ ಭವನ. ಬೆಂಗಳೂರು.
2. ಕಬ್ಬಿನಾಲೆ ವಸಂತ ಭಾರಧ್ವಾಜ್. (2005). ಅಂಬುರುಹದಳ- ಯಕ್ಷಗಾನ ಲೇಖನಗಳು. ಕನ್ನಡ ಬಳಗ. ಬೆಂಗಳೂರು.
3. ನಾಗೇಶ ರಂಗೋ ಕುಲಕರ್ಣಿ (ಅನು). (2012). ಶ್ರೀಮದ್ ದೇವೀಭಾಗವತ. ಪ್ರತಿಭಾ ಗ್ರಂಥಮಾಲೆ. ಧಾರವಾಡ.
4. ಪಂಡಿತ್ ವೆಂಕಟರಾವ್ (ಅನು). (1944). ಶ್ರೀ ಕಾಳಿಕಾಪುರಾಣಂ. ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ.
5. ಪಾದೆಕಲ್ಲು ವಿಷ್ಣು ಭಟ್ಟ (ಸಂ). (2014). ಮಹಾಜನಪದ. ರಾಷ್ಟ್ರಕವಿ ಗೋಂವಿದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು. ಉಡುಪಿ.
6. ಸ್ವಾಮಿ ಹರ್ಷಾನಂದ. (2016). ಶ್ರೀ ದುರ್ಗಾಸಪ್ತಶತೀ. ಶ್ರೀರಾಮಕೃಷ್ಣ ಆಶ್ರಮ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.